**CW : 5**

PW : 5

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.864/2023

| | | |
|---|---|---|
| ಸಾಕ್ಷಿದಾರರ ಹೆಸರು | : | ರಜನೀಶ ಕೆ ಹೆಚ್ |
| ತಂದೆಯ ಹೆಸರು | : | ಹರಿಯಣ್ಣ ಗೌಡ |
| ಪ್ರಾಯ | : | 37 ವರ್ಷ |
| ಉದ್ಯೋಗ | | ಅಕೌಂಟೆಂಟ್ |
| ವಾಸಸ್ಥಳ | : | ಕೊಳ್ತಿಗೆ ಗ್ರಾಮ |

ದಿನಾಂಕಃ**08.01.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನನಗೆ ಚಾಸಾ-2 ಮತ್ತು 3 ರವರ ಪರಿಚಯ ಇರುತ್ತದೆ. ಅಪಘಾತವು ಕೊಳ್ತಿಗೆ ಗ್ರಾಮದ ಪೆರ್ನಾಜೆ ಹತ್ತಿರ ಸುಮಾರು 2-3 ವರ್ಷಗಳ ಹಿಂದೆ ಆಯಿತು. ಯಾವ ವಾಹನಗಳ ಮದ್ಯೆ ಅಪಘಾತ ಆಯಿತು ಎಂದು ನನಗೆ ಗೊತ್ತಿಲ್ಲ. ನಾನು ಅಪಘಾತ ಸ್ಥಳಕ್ಕೆ ಹೋಗಿದ್ದೆನು. ನಾವು ಅಲ್ಲಿಗೆ ಹೋಗುವಷ್ಟರಲ್ಲಿ ಚಾಸಾ-2 ಮತ್ತು 3 ರವರ ಮಗ ಚಾಸಾ-1 ರವರು ಗಾಯಾಳುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಅಪಘಾತವನ್ನು ನಾನು ಪ್ರತ್ಯಕ್ಷ ನೋಡಿಲ್ಲ. ಚಾಸಾ-2 ಮತ್ತು 3 ರವರಿಗೆ ಹೇಗೆ ಅಪಘಾತ ಆಯಿತು ಮತ್ತು ಯಾರ ತಪ್ಪಿನಿಂದ ಅಪಘಾತ ಆಯಿತು ಎಂದು ಗೊತ್ತಿಲ್ಲ. ಪೋಲೀಸರು ಅಪಘಾತ ಸಂಬಂಧಿತವಾಗಿ ನನ್ನ ವಿಚಾರಣೆ ಮಾಡಿದ್ದಾರೆ.

ಸಾಕ್ಷಿಯು ನಿಪಿ-4 ಮತ್ತು 5 ಭಾವಚಿತ್ರಗಳಲ್ಲಿ ಕಾಣುವ ವಾಹನಗಳನ್ನು ನೋಡಿ ಗುರುತಿಸಿರುವುದಿಲ್ಲ. ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಲಾದ ಕಾರಿನ ಬಿಡಿಭಾಗಗಳನ್ನು ನಾನು ಈ ಮೊದಲು ಎಲ್ಲೂ ನೋಡಿಲ್ಲ. ಆರೋಪಿ ನನಗೆ ಗೊತ್ತಿಲ್ಲ. ಅವರನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು : ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸ.ಸ.ಅ. ರವರಿಂದಃ**

ದಿ.26.02.23 ರಂದು ಮದ್ಯಾಹ್ನ ಸುಮಾರು 3.00 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-4 ರವರು ಮೈಸೂರು-ಮಾಣಿ ಹೆದ್ದಾರಿಯಲ್ಲಿರುವ ಮಾಡ್ನೂರು ಗ್ರಾಮದ ಕಂಟ್ರಮಜಲು ಎಂಬಲ್ಲಿ ಮಾತನಾಡುತ್ತಾ ನಿಂತಿದ್ದಾಗ ಚಾಸಾ-2 ರವರು 3 ರವರನ್ನು ಸ್ಕೂಟರೊಂದರಲ್ಲಿ ಕೂರಿಸಿಕೊಂಡು ಚಾಲನೆ ಮಾಡುತ್ತಾ ನಾವು ನಿಂತಿದ್ದ ಸ್ಥಳ ತಲುಪಿದಾಗ ಆ ಸ್ಕೂಟರಿನ ಹಿಂದಿನಿಂದ ಬಿಳಿ ಬಣ್ಣದ ಬೆನ್ಜ್ ಕಾರೊಂದನ್ನು ಅದರ ಚಾಲಕ ಅಜಾಗರೂಕತೆ ಹಾಗೂ ನಿರ್ಲಕ್ಷ್ಯತನದಿಂದ ಚಲಾಯಿಸಿಕೊಂಡು ಬಂದು ಚಾಸಾ-2 ರವರು ಚಲಾಯಿಸುತ್ತಿದ್ದ ಸ್ಕೂಟರನ್ನು ಓವರ್ಟೇಕ್ ಮಾಡುತ್ತಾ ಸದರಿ ಸ್ಕೂಟರಿಗೆ ಡಿಕ್ಕಿಪಡಿಸಿದರು ಎಂದರೆ ಸರಿಯಲ್ಲ. ಅಪಘಾತದಲ್ಲಿ ಚಾಸಾ-2 ಮತ್ತು 3 ರವರು ರಸ್ತೆಗೆ ಬಿದ್ದು ಗಾಯಗಳಾಗಿದ್ದರೂ ಕೂಡಾ ಕಾರಿನ ಚಾಲಕ ಗಾಯಗೊಂಡ ಗಾಯಾಳುಗಳಿಗೆ ಚಿಕಿತ್ಸೆಯ ವ್ಯವಸ್ಥೆ ಮಾಡದೇ ಹಾಗೂ ಕಾರನ್ನು ನಿಲ್ಲಿಸದೇ ಕಾರಿನೊಂದಿಗೆ ಪುತ್ತೂರಿಗೆ ಹೊರಟುಹೋದನು ಎಂದರೆ ಸರಿಯಲ್ಲ, ನಾನು ಅಪಘಾತವನ್ನು ಕಣ್ಣಾರೆ ನೋಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ-2 ಓಡಿಸುತ್ತಿದ್ದ ಸ್ಕೂಟರ್ ನೊಂದಣಿ ಸಂ.ಕೆ-21-ವೈ-6146 ಆಗಿದ್ದು ಅಪಘಾತಪಡಿಸಿದ ಕಾರಿನ ನೊಂದಣಿ ಸಂ. ಪಿವೈ-05-ಎ-3589 ಆಗಿತ್ತು ಹಾಗೂ ಕಾರಿನ ಚಾಲಕನ ಹೆಸರು ಶಂಬುಶರ್ಮ ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ಅಪಘಾತ ಕಾರು ಚಾಲಕನ ಅಜಾಗರೂಕತೆ ಮತ್ತು ನಿರ್ಲಕ್ಷ್ಯತನದ ವಾಹನ ಚಾಲನೆಯಿಂದ ಆಗಿದೆ ಎಂದರೆ ಸರಿಯಲ್ಲ.

ಅಪಘಾತ ಸಂಬಂಧಿತವಾಗಿ ಪೊಲೀಸ್ ಅಧಿಕಾರಿಯವರಿಗೆ ನನಗೆ ಈಗ ಓದಿ ಹೇಳಿದಂತೆ " ನಾನು ಮೇಲ್ಕಾಣಿಸಿದ ವಿಳಾಸದಲ್ಲಿ ----- ಚಾಲಕನನ್ನು ಮುಂದಕ್ಕೆ ನೋಡಿದರೆ ಗುರುತಿಸುತ್ತೇನೆ " ಎಂದು ಹೇಳಿಕೆಯನ್ನು ದಿ.28-02-23 ರಂದು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು.

ಅಪಘಾತವನ್ನು ಕಣ್ಣಾರೆ ನೋಡಿದ್ದರೂ ಕೂಡಾ ಆರೋಪಿಯನ್ನು ಶಿಕ್ಷೆಯಿಂದ ರಕ್ಷಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**CW : 5**

PW : 5

<u>ಪಾಟೀ ಸವಾಲುಃಆರೋಪಿತರ ಪರ ಶ್ರೀ  ವಕೀಲರಿಂದಃ</u>

ಏನೂ ಇರುವುದಿಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.